ಅ) ಮೇಲಿನ ಉತ್ತರದಿಂದ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಅಂದಾಜು ಸರ್ಕಾರಕ್ಕೆ ಬಂದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಸಾರ್ವಜನಿಕ ಉದ್ದಿಮೆಗಳು ಅನುಭವಿಸುತ್ತಿರುವ ನಷ್ಟ

562 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬಳ್ಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದವರ ಸ್ವಾಮ್ಯದಲ್ಲಿರುವ ಸಾರ್ವಜನಿಕ ಉದ್ದಿಮೆಯ ಸಂಸ್ಥೆಗಳು ವಿಪರೀತವಾಗಿ ನಷ್ಟವನ್ನು ಅನುಭವಿಸುತ್ತಿದ್ದು ಮೂಲ ಬಂಡವಾಳವನ್ನು ಮುಗಿಸುವ ಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನಗತ್ಯವಾಗಿ ಮತ್ತು ಸತತವಾಗಿ ನಷ್ಟ ಅನುಭವಿಸುತ್ತಿರುವ ರೋಗಗ್ರಸ್ತ ಸಂಸ್ಥೆಗಳನ್ನು ಪುನಶ್ಚೇತಗೊಳಿಸಲು ಸರ್ಕಾರದವರ ಕಾರ್ಯಕ್ರಮವೇನು?

ಇ) ಯಾವುದಾದರೂ ಸಂಸ್ಥೆಗಳನ್ನು ಮುಚ್ಚಲು ಅಥವಾ ಹಸ್ತಾಂತರಿಸಲು ಸರ್ಕಾರದವರ ಯೋಚನೆಯಲ್ಲಿದೆಯೇ?

ಈ) ಹಾಗಿದ್ದಲ್ಲಿ ಆ ಸಂಸ್ಥೆಗಳಾವುವು?

ಶ್ರೀಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು):

ಅ) ಸರ್ಕಾರದ ಸ್ವಾಮ್ಯದಲ್ಲಿರುವ ಕೆಲವು ಉದ್ದಿಮೆಗಳು ನಷ್ಟವನ್ನು ಅನುಭವಿಸುತ್ತಿದ್ದು ಮೂಲ ಬಂಡವಾಳವನ್ನು ಮುಗಿಸುವ ಸ್ಥಿತಿಗೆ ತಲುಪಿರುವುದು ನಿಜ.

ಆ) ರೋಗಗ್ರಸ್ಥ ಉದ್ದಿಮೆಗಳು ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಸಾರ್ವಜನಿಕ ಉದ್ದಿಮೆಗಳ ಕಾರ್ಯ ನಿರ್ವಹಣೆಯನ್ನು ಸಚಿವ ಸಂಪುಟದ ಉಪ ಸಮಿತಿಯು ಪರಿಶೀಲಿಸಿ ಶಿಫಾರಸ್ಸು ನೀಡಿದೆ. ಇದರಂತೆ ಉದ್ದಿಮೆಗಳ ಮುಚ್ಚುವಿಕೆ, ಹಸ್ತಾಂತರಿಸುವಿಕೆ ಮತ್ತು ವಿಲೀನಿಕರಿಸುವಿಕೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ನಾಲ್ಕು ಉದ್ದಿಮೆಗಳನ್ನು ಮುಚ್ಚಲು ಮತ್ತು ಎರಡು ಉದ್ದಿಮೆಗಳನ್ನು ಹಸ್ತಾಂತರಿಸಲು ತೀರ್ಮಾನಿಸಿದೆ.

ಈ) ಮುಚ್ಚಲು ತೀರ್ಮಾನಿಸಿದವು,

1) ಕಿಂಪ್ಕೋ

2) ಮೈಸೂರು ಕ್ರೋಮ್‌ಟ್ಯಾನಿಂಗ್ ಕಂಪನಿ

3) ಕರ್ನಾಟಕ ರಾಜ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ನಿಗಮ

4) ಕರ್ನಾಟಕ ಪಲ್ಪ್‌ವುಡ್ ಲಿಮಿಟೆಡ್

ಹಸ್ತಾಂತರಿಸಲು ತೀರ್ಮಾನಿಸಿರುವ ಉದ್ದಿಮೆಗಳು

1) ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಲಿ.

2) ಮಹದೇವ ಟೆಕ್ಸ್‌ಟೈಲ್ ಲಿಮಿಟೆಡ್

ಇರಿಗೇಷನ್ ಟ್ಯಾಕ್ಸ್ ರಸ್ತೆಗಳು.

606 - ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀ ರಂಗಪಟ್ಟಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?